ಆ) ನ್ಯಾದಂರಸ್ತಿಯಾದ ವಾಹನಗಳನ್ನು ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ಇವರು ಪರಿಶೀಲಿಸಿ, ಇವರ ಮಂತ್ರು ಸರಕಾರದ ಆದೇಶದ ಮೇರೆಗೆ ಹರಾಜು ಮಾಡಲಾಗುವುದು. ಹರಾಜು ಮಾಡಲಾದ ಹಣವು ಪುಸ್ತಕದ ಬೆಲೆಗಿಂತ ಕಡಿಮೆ ಆಗುವುದಿಲ್ಲವೆಂದೂ ಮತ್ತು ಯಾವ ಹಾನಿ ಯಾಗುವುದಿಲ್ಲವೆಂದೂ ಭಾವಿಸಲಾಗಿದೆ.

ಕರ್ನಾಟಕದಲ್ಲಿ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ

೪೫೪. ಗೋಪಾಲ್ ಎಂ. ಕಾನಡೆ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಐ.ಎ.ಎಸ್. ಐ.ಪಿ.ಎಸ್, ಅಧಿಕಾರಿಗಳ ಸಂಖ್ಯೆ ಎಷ್ಟು ? ಆ ಪೈಕಿ ಎಷ್ಟು ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ಆಪಾದನೆಗಳಿವೆ ಹಾಗೂ ಶಿಕ್ಷೆಗೆ ಒಳಗಾಗಿರುವವರ ಸಂಖ್ಯೆ ಎಷ್ಟು ?

ಆ) ಭ್ರಷ್ಟಾಚಾರಕ್ಕೊಳಗಾಗಿರುವ ಅಧಿಕಾರಿಗಳ ಹೆಸರು ಹಾಗೂ ಕೈಗೊಂಡ ಕ್ರಮದ ವಿವರ ಒದಗಿಸುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು),—

ಅ) ರಾಜ್ಯದಲ್ಲಿರುವ ಅಧಿಕಾರಿಗಳ ಸಂಖ್ಯೆ	ಐ.ಎ.ಎಸ್.	೨೪೨
	ಐ.ಪಿ.ಎಸ್.	೧೦೭
ಭ್ರಷ್ಟಾಚಾರದ ಆಪಾದನೆಗಳಿರುವ ಅಧಿಕಾರಿಗಳ ಸಂಖ್ಯೆ	ಐ.ಎ.ಎಸ್.	೩
	ಐ.ಪಿ.ಎಸ್.	ಇಲ್ಲ
ಶಿಕ್ಷೆಗೆ ಒಳಗಾಗಿರುವ ಅಧಿಕಾರಿಗಳ ಸಂಖ್ಯೆ	ಐ.ಎ.ಎಸ್.	ಇಲ್ಲ
	ಐ.ಪಿ.ಎಸ್.	ಇಲ್ಲ

ಆ) ಶ್ರೀ ಕೆ. ರಂಗಪ್ಪ, ವಿಚಾರಣಾ ಅಧಿಕಾರಿಯನ್ನು ನೇಮಿಸಲಾಗಿದೆ.
ಶ್ರೀ ಐ. ದೇವೆಂದ್ರಪ್ಪ, ತನಿಖೆಗಾಗಿ ಲೋಕಾಯುಕ್ತಕ್ಕೆ ಕಳುಹಿಸಲಾಗಿದೆ.

ಶ್ರೀ ಪಿ. ಜಿ. ನಾಯಕ್, ತನಿಖೆಗಾಗಿ ಲೋಕಾಯುಕ್ತಕ್ಕೆ ಕಳುಹಿಸಲಾಗಿತ್ತು. ವರದಿ ಬಂದು ಪರಿಶೀಲನೆಯಲ್ಲಿದೆ.

ಯೋಜನೇತರ ವೆಚ್ಚ ಕಡಿಮೆಗೊಳಿಸುವುದು

೩೫೧. **ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).**—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಯೋಜನೇತರ ವೆಚ್ಚಗಳನ್ನು ಕಡಿಮೆಗೊಳಿಸುವಲ್ಲಿ ಕೈಗೊಂಡ ಕ್ರಮಗಳು ಯಾವುವು ?

ಆ) ೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ ಸಾಲಿನಲ್ಲಿ ಪ್ರತಿವರ್ಷ ಪ್ರತಿ ಶತ ವೆಚ್ಚ ಕಡಿತ ಎಷ್ಟು ಆಗಿದೆ ? (ರಾಜ್ಯದ ವಿವಿಧ ಇಲಾಖಾವಾರು ಕಡಿತದ ಹಣ ನಮೂದಿಸುವುದು),

ಇ) ಯೋಜನೇತರ ವೆಚ್ಚ ಹೆಚ್ಚುತ್ತಿರುವುದರಿಂದ, ಯೋಜನೆಗಳ ಅನುಷ್ಠಾನಕ್ಕೆ ಆರ್ಥಿಕ ತೊಂದರೆಯು ಕಾಣಿಸುವುದಿಲ್ಲವೆ ?

ಈ) ಹಾಗಿದ್ದಲ್ಲಿ ಯೋಜನೆಗಳಿಗೆ ಆಗುತ್ತಿರುವ ತೊಂದರೆ ನಿವಾರಣೆಗೆ ಕೈಗೊಂಡ ಕ್ರಮಗಳೇನು

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿ).—

ಅ) ಯೋಜನೇತರ ವೆಚ್ಚವನ್ನು ಕಡಿಮೆಗೊಳಿಸುವ ಸಲುವಾಗಿ ಸರ್ಕಾರವು ಕಾಲದಿಂದ ಕಾಲಕ್ಕೆ ಮಿತವ್ಯಯ ಕ್ರಮಗಳನ್ನು ಜಾರಿಗೊಳಿಸುತ್ತದೆ. ವಿವಿಧ ಬಾಬುಗಳ ಮೇಲಣ ಯೋಜನೇತರ ವೆಚ್ಚವನ್ನು ನಿರ್ಬಂಧಗೊಳಿಸುವ ಸಲುವಾಗಿ ಮಿತವ್ಯಯ ಆದೇಶಗಳನ್ನು ಹೊಸಡಿಸಲಾಗಿದೆ. ಶೂನ್ಯಧಾರಿತ ಆಯವ್ಯಯ ಕ್ರಮದಡಿಯಲ್ಲಿ ಕೈಬಿಡಬಹುದಾದ ಕಡಿಮೆ ಮಾಡಬಹುದಾದಂತಹ ನಿರ್ದಿಷ್ಟ ವೆಚ್ಚದ ಬಾಬುಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅ) ೧೯೮೭-೮೮ನೇ ಸಾಲಿನ ಆಯವ್ಯಯದಲ್ಲಿ ಪ್ರಶಿಯೂಂದು ಇಲಾಖೆಗಳ ಯೋಜನೇತರ ಆಯವ್ಯಯದಲ್ಲಿ ಹಂಚಿಕೆಯಾದ ಹಣದಲ್ಲಿ ಶೇ. ೧೦ರಷ್ಟನ್ನು ಕಡಿತಗೊಳಿಸಲಾಗಿತ್ತು, ೧೯೮೯-೯೦ನೇ ಸಾಲಿಗೆ ಇಂತಹ ಒಂದು ಕ್ರಮವನ್ನು ಜಾರಿಗೊಳಿಸಿಲ್ಲ,

ಇ) ಮತ್ತು ಈ) ರಾಜ್ಯದ ಯೋಜನೆಗಾಗಿ ಬೇಕಾಗುವ ಸಂಪನ್ಮೂಲವು ರಾಜ್ಯದ ಸ್ವಂತ ಸಂಪನ್ಮೂಲವನ್ನಲ್ಲದೆ, ಕೇಂದ್ರದಿಂದ ರಾಜ್ಯಕ್ಕೆ ಶಾಸನ ಬದ್ಧ ಮತ್ತು ಶಾಸನ ಬದ್ಧವಲ್ಲದ ವರ್ಗಾವಣೆಯ ಮೂಲಕ ಬರುವ ಸಂಪನ್ಮೂಲವನ್ನು ಕೂಡ ಅವಲಂಬಿಸಿದೆ. ರಾಜ್ಯದ ಯೋಜನೇತರ ವೆಚ್ಚವನ್ನು ನಿರ್ಬಂಧಿಸಲು ಪ್ರತಿಯೊಂದು ಪ್ರಯತ್ನವನ್ನೂ ಮಾಡಲಾಗಿದೆ.

ನಗರ ಪ್ರದೇಶಗಳಲ್ಲಿ ಹಸಿರು ಕಾರ್ಡ್ ಕೊಡುವುದು

೫೦೫. ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೨೦,೦೦೦ ಜನಸಂಖ್ಯೆಯೊಳಗಿನ ನಗರ ಪ್ರದೇಶಗಳಿಗೆ ಹಸಿರು ಕಾರ್ಡ್ ಕೊಡಬೇಕೆನ್ನುವುದನ್ನು ಸರ್ಕಾರಿವವರೇ ಉದ್ದೇಶಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಕಾರ್ಯ ರೂಪದಲ್ಲಿ ತರಲು ಇರುವ ತೊಡಕುಗಳೇನು ?

ಇ) ಯಾವ ರೀತಿ ಪರಿಹಾರ ಕಂಡುಹಿಡಿದು ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ವಿಶ್ವನಾಥರೆಡ್ಡಿ ಮಣಿಪ್ಪಳ್ಳಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) (ಕಲಂ ''ಆ''ಗೆ ನೀಡಿರುವ ಉತ್ತರದ ನಿಮಿತ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ)

ಸನ್ನತಿ ನದಿ ಬಳಿ ಭೀಮಾ ನದಿಗೆ ನಿರ್ಮಿಸಲಿರುವ ಅಣೆಕಟ್ಟು

೫೬೮. ಶ್ರೀ ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸನ್ನತಿ ಗ್ರಾಮದ ಬಳಿ ಭೀಮಾ ನದಿಗೆ ನಿರ್ಮಿಸಲು ಉದ್ದೇಶಿಸಿರುವ ಅಣೆಕಟ್ಟಿನಿಂದ ಐತಿಹಾಸಿಕ ಸನ್ನತಿ ಕ್ಷೇತ್ರ ಶಾಬಾದ್ ಕಲ್ಲಿನ ಖನಿಜ ಸಂಪತ್ತು, ಹಾಗೂ ಕರ್ನಾಟಕದ ೧೫ ಗ್ರಾಮಗಳು ಮುಳುಗಡೆಯಾಗುವುದು ನಿಜವಲ್ಲವೆ ?

ಆ) ಸದರಿ ಅಣೆಕಟ್ಟಿಯು ನಿರ್ಮಾಣವನ್ನು ಕೈಬಿಟ್ಟು ಶಹಾಪುರದ ಬಳಿ ಭೀಮಾ ನದಿಗೆ ಅಡ್ಡಲಾಗಿ ೧೪ ಕೋಟಿ ರೂ.ಗಳ ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗುವುದೆಂದು ಹೇಳಿಕೆ ನೀಡಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಕೂಡಲೇ ಸೇತುವೆ ನಿರ್ಮಿಸುವ ಬಗ್ಗೆ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).

ಅ) ಹೌದು

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.